**ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ದೇವದುರ್ಗ ನ್ಯಾಯಾಲಯ, ದೇವದುರ್ಗ.**

**ಸಿ.ಸಿ ನಂ.461/2024**

ಪಿರ್ಯಾದಿದಾರರು : ಗಬ್ಬೂರು ಪೋಲಿಸ್ ಠಾಣೆ.

**ವಿರುದ್ಧ**

ಆರೋಪಿ: 1. ಚನ್ನಮ್ಮ ಗಂಡ ಮಾಯಪ್ಪ, ವಯಸ್ಸುಃ 56 ವರ್ಷಗಳು,
ಉಃ ಮನೆಕೆಲಸ, ಸಾಃ ನಿಲೋಗಲ್, ತಾಃ ದೇವದುರ್ಗ,

**<u>ಭಾರತ ದಂಡ ಸಂಹಿತೆ ಕಲಂ 313 ರ ರಿತ್ಯಾ ಆರೋಪಿಗಳ ಹೇಳಿಕೆಗಳು</u>**

ಪ್ರಶ್ನೆ-1) ನ್ಯಾಯಾಲಯದಲ್ಲಿ ಅಭಿಯೋಜನೆಯ ಪರ ನೀಡಿದ ಸಾಕ್ಷಿದಾರರ ಸಾಕ್ಷ್ಯವನ್ನು ಕೇಳಿಕೊಂಡಿದ್ದಿರಾ ?

ಉತ್ತರಃ

ಪ್ರಶ್ನೆ-2) ಫ್ರಾಸಾ-3 ಶಂಕರ ಇಂಗಳೆ ತಂದೆ ಬಸವರಾಜ ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 20-04-2024 ರಂದು ಸಂಜೆ 06.15 ಗಂಟೆಗೆ ನಾನು, ರಮೇಶ ಶಬ್ಬೀರ್, ಶಿವರಾಜ, ನೀಲಕಂಠ ಮತ್ತು ಕೋನಮ್ಮ ಠಾಣೆಯಲ್ಲಿ ಇದ್ದಾಗ ಪಿ.ಎಸ್.ಐ ಇವರು ಕರೆದು ನಿಲೋಗಲ್ ಗ್ರಾಮದ ಸಾರ್ವಜನಿಕ ಸ್ಥಳದಲ್ಲಿ ಅಕ್ರಮವಾಗಿ ಮಧ್ಯ ಮಾರಾಟದ ಬಾತ್ಮಿ ಬಂದಿರುವುದನ್ನು ತಿಳಿಸಿರುತ್ತಾರೆ ಎಂದು ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನಾದರೂ ಹೇಳುವುದು ಇದೆಯೇ ?

ಉತ್ತರಃ

ಪ್ರಶ್ನೆ-3) ಫ್ರಾಸಾ-3 ರವರು ತಮ್ಮ ಮುಂದುವರೆದ ಮುಖ್ಯವಿಚಾರಣೆಯಲ್ಲಿ, ತಕ್ಷಣ ಪಂಚರಾದ ಶಿವು ಮತ್ತು ಚನ್ನಪ್ಪ ರವರನ್ನು ಬರ ಮಾಡಿಕೊಂಡು ಸಂಜೆ 06.30 ಗಂಟೆಗೆ ಠಾಣೆಯಿಂದ ಸರಕಾರಿ ಜೀಪಿನಲ್ಲಿ ನಿಲೋಗಲ್ ಗ್ರಾಮಕ್ಕೆ ಹೋಗಿ ಅಂಬೇಡ್ಕರ ಭವನದ ಹತ್ತಿರ ಜೀಪನ್ನು ನಿಲ್ಲಿಸಿ ಸ್ವಲ್ಪ ದೂರ ನಡೆದುಕೊಂಡು ಹೋಗಿ ಮರೆಯಲ್ಲಿ ನಿಂತು ನೋಡಿದಾಗ ಒಬ್ಬ

ಮಹಿಳೆ ತನ್ನ ಮನೆ ಮುಂದೆ ಸಾರ್ವಜನಿಕ ಸ್ಥಳದಲ್ಲಿ ಅಕ್ರಮ ಮಧ್ಯ ಮಾರಾಟ ಮಾಡುತ್ತಿದ್ದ ಸುತ್ತಲೂ ಜನರು ನಿಂತು ಹಣ ನೀಡಿ ಮಧ್ಯದ ಪೌಚುಗಳನ್ನು ಖರೀದಿಸುತ್ತಿದ್ದರು ಎಂದು ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನಾದರೂ ಹೇಳುವುದು ಇದೆಯೇ ?

ಉತ್ತರಃ

ಪ್ರಶ್ನೆ-4) ಫ್ರಾಸಾ-3 ರವರು ತಮ್ಮ ಮುಂದುವರೆದ ಮುಖ್ಯವಿಚಾರಣೆಯಲ್ಲಿ, ತಕ್ಷಣ ದಾಳಿ ಮಾಡಿದಾಗ ಮಾರಾಟ ಮಾಡುತ್ತಿದ್ದವರು ಸಿಕ್ಕಿದ್ದು ಅವರನ್ನು ವಿಚಾರಿಸಿದಾಗ ಹೆಸರು ಚನ್ನಮ್ಮ ಗಂಡ ಮಾಯಪ್ಪ ಎಂದು ತಿಳಿಸಿರುತ್ತಾರೆ. ಸ್ಥಳದಲ್ಲಿ ಪಂಚರ ಸಮಕ್ಷಮ ಚೀಲವನ್ನು ಪರಿಶೀಲಿಸಿದಾಗ 90 ಎಂ.ಎಲ ಓ.ಸಿ ವಿಸ್ಕಿ 1248 ಪೌಚುಗಳು, 180 ಎಂ.ಎಲ ಬಿ.ಪಿ ವಿಸ್ಕಿ 48 ಪೌಚುಗಳು, 650 ಎಂ.ಎಲ ಕೆ.ಎಫ್ ಸ್ಟ್ರಾಂಗ್ ಬಿಯರ್ 51 ಬಾಟಲಿಗಳು ಮತ್ತು 330 ಎಂ.ಎಲ ಕೆ.ಎಫ್ ಟಿನ್ ಬಿಯರ್ 94 ಬಾಟಲಿಗಳು ಇದ್ದವು ಎಂದು ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನಾದರೂ ಹೇಳುವುದು ಇದೆಯೇ ?

ಉತ್ತರಃ

ಪ್ರಶ್ನೆ-5) ಫ್ರಾಸಾ-3 ರವರು ತಮ್ಮ ಮುಂದುವರೆದ ಮುಖ್ಯವಿಚಾರಣೆಯಲ್ಲಿ, ಅವುಗಳನ್ನು ಜಪ್ತಿ ಮಾಡಿಕೊಂಡು ಅವುಗಳನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಲು 22 ಬಾಕ್ಸಗಳಲ್ಲಿ ತೆಗೆದು ಸೀಲ್ ಮಾಡಿಲಾಗಿರುತ್ತದೆ. ಸದರಿ ಪಂಚನಾಮೆಯನ್ನು ಸಂಜೆ 7 ರಿಂದ 8 ಗಂಟೆ ವರೆಗೆ ಮಾಡಲಾಗಿರುತ್ತದೆ. ನಂತರ ಪಿ.ಎಸ್.ಐ ಇವರು ಠಾಣೆಗೆ ಬಂದು ಜಪ್ತಿ ಮಾಡಿದ ಮುಮಾ, ದೂರು ಮತ್ತು ಪಂಚನಾಮೆ ಜೊತೆ ಬಂದಯ್ಯ ರವರಿಗೆ ಪ್ರಕರಣ ದಾಖಲು ಮಾಡಲು ಹೇಳಿರುತ್ತಾರೆ ಎಂದು ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನಾದರೂ ಹೇಳುವುದು ಇದೆಯೇ ?

ಉತ್ತರಃ

ಪ್ರಶ್ನೆ-6) ಫ್ರಾಸಾ-5 ಬಂದಯ್ಯ ತಂದೆ ಬಸ್ಸಯ್ಯ ಇವರು ತಮ್ಮ ಸಾಕ್ಷಿಯಲ್ಲಿ ದಿನಾಂಕ 20-04-2024 ರಂದು ನಾನು ಠಾಣೆಯಲ್ಲಿ ಇದ್ದಾಗ ರಾತ್ರಿ 08.30 ಗಂಟೆಗ ಪಿ.ಎಸ್.ಐ ಇವರು ಠಾಣೆಗೆ ಬಂದು ದಾಳಿ ಪಂಚನಾಮೆ ಮತ್ತು ಅವರದಿ ಆಧಾರದ ಮೇಲೆ ಠಾಣ ಗುನ್ನ

ನಂ.55/2024 ರಲ್ಲಿ ಪ್ರಕರಣ ದಾಖಲು ಮಾಡಿಕೊಂಡು ಪ್ರ.ವ ವರದಿ ತಯಾರಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದು ನಿಮ್ಮ ವಿರುದ್ದ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೆನಾದರೂ ಹೇಳುವುದು ಇದೆಯೇ ?

ಉತ್ತರಃ

ಪ್ರಶ್ನೆ-7) ಪ್ರಾಸಾ-5 ರವರು ತಮ್ಮ ಮುಂದುವರೆದ ಮುಖ್ಯವಿಚಾರಣೆಯಲ್ಲಿ, ಅದೇ ದಿನ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದಿರುತ್ತೇನೆ. ಜಪ್ತಿ ಮಾಡಿದ ಮುಮಾಗಳನ್ನು ನ್ಯಾಯಾಲಯಕ್ಕೆ ಪಿ.ಎಫ್ ನಂ.45/2024 ಮೂಲಕ ಸಲ್ಲಿಸಿರುತ್ತೇನೆ. ದಿನಾಂಕ 21.04.2024 ರಂದು ಜಪ್ತಿ ಮಾಡಿದ ಮಧ್ಯವನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಿಕೊಟ್ಟಿರುತ್ತೇನೆ ಎಂದು ನಿಮ್ಮ ವಿರುದ್ದ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೆನಾದರೂ ಹೇಳುವುದು ಇದೆಯೇ ?

ಉತ್ತರಃ

ಪ್ರಶ್ನೆ-8) ಪ್ರಾಸಾ-5 ರವರು ತಮ್ಮ ಮುಂದುವರೆದ ಮುಖ್ಯವಿಚಾರಣೆಯಲ್ಲಿ, ದಿನಾಂಕ 09.05.2024 ರಂದು ರಾಸಾಯನಿಕ ವರದಿ ಪಡೆದಿರುತ್ತೇನೆ. ದಿನಾಂಕ 09.05.2024 ರಂದು ಆರೋಪಿ ನಿರೀಕ್ಷಣ ಜಾಮೀನಿನೊಂದಿಗೆ ಠಾಣೆಗೆ ಹಾಜರಾಗಿದ್ದು ಬಂದನದ ನಿಯಮಗಳನ್ನು ಪಾಲಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ನ್ಯಾಯಾಲಯಕ್ಕೆ ಅಂತಿಮ ವರದಿ ಸಲ್ಲಿಸಿರುತ್ತೇನೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ ಎಂದು ನಿಮ್ಮ ವಿರುದ್ದ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೆನಾದರೂ ಹೇಳುವುದು ಇದೆಯೇ?

ಉತ್ತರಃ

ಪ್ರಶ್ನೆ-9) ನೀವು ಏನಾದರೂ ಹೇಳುವುದಕ್ಕೆ ಬಯಸುತ್ತೀರಾ?

ಉತ್ತರಃ

ಪ್ರಶ್ನೆ-10) ನೀರು ಸಾಕ್ಷಿ ವಿಚಾರಣೆ ಮಾಡಲು ಬಯಸುತ್ತೀರಾ?

ಉತ್ತರಃ

(ಆರೋಪಿಯ ಹೇಳಿಕೆಯನ್ನು ಸ್ವತಃ ನಾನೆ ನನ್ನ ಸಮಕ್ಷಮ ಪಡೆದಿದ್ದು, ಅವರು ನುಡಿದಿದ್ದನ್ನು ಕೇಳಿಸಿಕೊಂಡು ಅವರು ಹೇಳಿದ್ದನ್ನು ನಮೂದಿಸಿರುತ್ತೇನೆಂದು ದೃಢಿಕರಿಸಿರುತ್ತೇನೆ).

ದಿನಾಂಕಃ 30-04-2026
ಸ್ಥಳಃ ದೇವದುರ್ಗ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ದೇವದುರ್ಗ.